ಅಧ್ಯಕ್ಷರು: ಈಗ ಸಭೆಯ ಮುಂದಿಡಲಾಗದ ಕಾಗದ ಪತ್ರಗಳು, ರಮಾನಾಥ ರೈ ರವರೆ ಕೇಳಿ.

8. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

1. ಶ್ರೀ ಯು. ಟಿ. ಖಾದರ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1. 1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮದ ಪ್ರಕರಣ 8 (3) ರ ಮೇರೆಗೆ:

2015ರ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ಹಿರಿಯ ವೈದ್ಯಾಧಿಕಾರಿಗಳು, ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ದಂತ ಆರೋಗ್ಯಾಧಿಕಾರಿಗಳು ನೇಮಕಾತಿ) (ವಿಶೇಷ) ನಿಯಮಗಳನ್ನು ರಚಿಸಿ ದಿನಾಂಕ; 15.07.2015 ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ; ಹೆಚ್.ಎಫ್.ಡಬ್ಲ್ಯೂ/38/ಹೆಚ್ ಎಸ್‌ಹೆಚ್/2015.

2. 2012ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮದ 2,3,4 ಮತ್ತು 5ನೇ ಪ್ರಕರಣಗಳ ಮೇರೆಗೆ:

2015ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸುವ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ಸಮಾಲೋಚನೆ, ಹಂಚಿಕೆ ಮತ್ತು ಪ್ರಮಾಣ ಪತ್ರ) ನಿಯಮಗಳನ್ನು ರಚಿಸಿ ದಿನಾಂಕ: 24.07.2015ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/249/ಹೆಚ್‌ಎಸ್‌ಹೆಚ್/2015.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

I. ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) ಅವರ ಹೆಸರಿನ ಮುಂದಿರುವ

1956ರ ಕಂಪನಿ ಅಧಿನಿಯಮ 619 ಎ ಪ್ರಕರಣದ ಮೇರೆಗೆ:

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 2014–15ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

II. ಶ್ರೀ ಆರ್. ರೋಷನ್ ಬೇಗ (ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು) ಅವರ ಹೆಸರಿನ ಮುಂದಿರುವ

1956ರ ಕಂಪನಿಗಳ ಅಧಿನಿಯಮ ಕಲಂ 619 (ಎ)ರ ಮೇರೆಗೆ

1. ಕೊಂಕಣ ರೈಲ್ವೆ ಕಾರ್ಪೋರೇಷನ್ 2014–15ನೇ ಸಾಲಿನ ವಾರ್ಷಿಕ ವರದಿ

2. ಹಾಸನ ಮಂಗಳೂರು ರೈಲು ಅಭಿವೃದ್ಧಿ ನಿಗಮ ನಿಯಮಿತದ 2014–15ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ,

III. ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು) ಅವರ ಹೆಸರಿನ ಮುಂದಿರುವ

1956ರ ಕಂಪನಿ ಕಾಯ್ದೆಯ 619 (4) ಮೇರೆಗೆ:

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತದ 2013–14ನೇ ಸಾಲಿನ ವಾರ್ಷಿಕ ವರದಿಯನ್ನು (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ಮಂಡಿಸುತ್ತೇನೆ.

VI. ಶ್ರೀ ಕೆ. ಜೆ. ಜಾರ್ಜ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾಯ್ದೆ 1973ರ ಕಲಂ 39 ಹಾಗೂ 42ರ ಮೇರೆಗೆ:

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ 2014–15ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಮೋಷನ್ ಅನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದನ್ನು ನಾವು ವಿರೋಧ ಮಾಡುತ್ತೇವೆ. ಇದು ಅಡ್ಮೀಟ್ ಆಗಬಾರದು. ಇದು ಪ್ರಜಾತಂತ್ರ ವಿರೋಧ ಮತ್ತು ಲೋಕಾಯುಕ್ತದಲ್ಲಿ voting ಕೂಡ ಆಗಲಿ. We demand for division. ಮಾನ್ಯ ಅಧ್ಯಕ್ಷರೆ ಒಂದು ಬಾರಿ ವಿರೋಧ ಪಕ್ಷದವರು division ಗೆ ಕೇಳಿದಾಗ ಅವಕಾಶ ಕೊಡಬೇಕು. ಇದು ಸರಿಯಾದಂತಹ ಸಂಸದೀಯ ನಡವಳಿಕೆ ಅಲ್ಲ. ಎಲ್ಲಾ ಪ್ರಜಾತಂತ್ರ ಸಂಸದೀಯ ನಡವಳಿಕೆಯನ್ನು ವಿರೋಧ ಮಾಡಿ ಇವತ್ತು ಆಡಳಿತ ಮಾಡುತ್ತಿದೆ. ಇದು ದುರಹಂಕಾರಿ, ಸರ್ವಾಧಿಕಾರಿ ಸರ್ಕಾರ. ಈ ಸದನದ ಇತಿಹಾಸದಲ್ಲಿ ಈ ರೀತಿ ಘಟನೆ ಯಾವುದೇ ಸಂದರ್ಭದಲ್ಲಿ ನಡೆದಿರಲಿಲ್ಲ. ಇವತ್ತು ಪ್ರತಿಪಕ್ಷದವರು ಡಿವಿಜನ್ ಕೇಳಿದಾಗ ಅದಕ್ಕೂ ಕೂಡ ಇಲ್ಲಿ ಅವಕಾಶ ಸಿಗಲಿಲ್ಲ. ಇದು ಸಂಸದೀಯ ನಡವಳಿಕೆ ಸರಿಯಲ್ಲ.

ಅಧ್ಯಕ್ಷರು: ನಿನ್ನೆ ಅಂದರೆ ದಿನಾಂಕ 26.11.2015ರಂದು ಸಮಾಜ ಕಲ್ಯಾಣ ಸಚಿವರನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. ಸರ್ಕಾರಕ್ಕೆ ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ ಬರಬೇಕೆಂದು, ಸರ್ಕಾರ ಇದು ಎನ್ನುವ ಮುಂತಾದ ಅಸಂಸದೀಯ ಪದಗಳನ್ನು

ಬಳಸಿದ್ದಾರೆ. ಸದರಿ ಅಸಂಸದೀಯ ಪದಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ಆದೇಶಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಇದು ಪ್ರಜಾತಂತ್ರ ವಿರೋಧಿ ಸರ್ಕಾರ. ಇವತ್ತು ಭ್ರಷ್ಟರಿಗೆ ರಕ್ಷಣೆ ಕೊಡುವಂತಹ ಸರ್ಕಾರ ಇದು. ಭ್ರಷ್ಟ ಮಂತ್ರಿಗಳಿಗೆ, ಭ್ರಷ್ಟ ಅಧಿಕಾರಿಗಳಿಗೆ, ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಇದು.

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನ ಮಂಡಲ ಸಂಸ್ಥೆಯ ಸರ್ವ ಸದಸ್ಯರ ಮಹಾಸಭೆಯನ್ನು ಈ ದಿನ ಮಧ್ಯಾಹ್ನ 3.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ನಡೆಸಲಾಗುತ್ತದೆ. ಆದುದರಿಂದ ಸಂಸ್ಥೆಯ ಮಾನ್ಯ ಸದಸ್ಯರೆಲ್ಲರೂ ಸರ್ವ ಸಭೆಗೆ ಹಾಜರಾಗುವಂತೆ ಕೋರುತ್ತೇನೆ.

ಈಗ ಪ್ರಶ್ನೋತ್ತರ.

(ಗೊಂದಲ)

9. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾಗುವ ಉತ್ತರಗಳು

ಅಧ್ಯಕ್ಷರು: ಸುಧಾಕರ ಲಾಲ್ ಪ್ರಶ್ನೆ ಕೇಳಿ, absent.

(ಗೊಂದಲ)

ಶ್ರೀ ಭೀಮಾನಾಯಕ್ ಎಲ್‌ಬಿಪಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುಧಾಕರ ಲಾಲ್ ಇದ್ದಾರೆ.

(ಗೊಂದಲ)

ಅಧ್ಯಕ್ಷರು: ಆಯಿತು. ಕೇಳಿ.

ಪ್ರಶ್ನೆ ಸಂಖ್ಯೆ: 436 (5963)

(ಉತ್ತರ ಲಗತ್ತಿಸಿದೆ)

ಅಧ್ಯಕ್ಷರು: ಅವರಿಗೆ ಉತ್ತರ ಕಳುಹಿಸಿಕೊಡಿ. ಮಾನ್ಯ ಸುಧಾಕರಲಾಲ್‌ರವರೆ, ತಮಗೆ ಉತ್ತರ ಕಳುಹಿಸಿಕೊಡುತ್ತಾರೆ.

(ಗೊಂದಲ)